೧೯೮೨-೮೩ ರಿಂದ ಮಂಜೂರಾತಿ ಪಡೆದ ಪೂರ್ಣ ಕಾಲಿಕ ಹುದ್ದೆಗಳಿಗೆ ಅವರ ನೇಮಕ. ಹೆಸರು ಮಾತ್ರ – ಅರೆಕಾಲಿಕ ಶಿಕ್ಷಕರು ಅವರಿಗೆಲ್ಲ ಉದ್ಯೋಗಕ್ಕೆ ಬೇಕಾದ ಪರಿಪೂರ್ಣ ಅರ್ಹತೆ, ಪೂರ್ಣ ಕಾಲಿಕ ಶಿಕ್ಷಕರಷ್ಟೇ. ಪಾಠಪ್ರವಚನ, ವೇತನ ಮಾತ್ರ ತಿಂಗಳಿಗೆ ಕೇವಲ ನೂರಿ ರೂಪಾಯಿ ಇಷ್ಟೊಂದು ಕನಿಷ್ಠ ಸಂಬಳದ ನೌಕರರು ಬಹುಶಃ ಬೇರಾವ ಇಲಾಖೆಯಲ್ಲೂ ಇಲ್ಲ. ನಿಮ್ಮ ಲೋಕೋಪಯೋಗಿ ಇಲಾಖೆಯ ಗ್ಯಾಂಗ್ ಕೂಲಿಗಳ ಸ್ಥಿತಿ ಎಷ್ಟೋ ಮೇಲು. ಕಳೆದ ೫ ವರ್ಷಗಳಿಂದಲೂ ಈ ಅರೆಕಾಲಿಕ ಶಿಕ್ಷಕರ ದುಡಿಮೆ. ದಕ್ಷಿಣ ಕನ್ನಡದಲ್ಲಿ ೩೪, ಹಾಸನದಲ್ಲಿ ೪೬. ಮೈಸೂರಿನಲ್ಲಿ ೩೧, ಮಂಡ್ಯ – ಚಿಕ್ಕಮಗಳೂರುಗಳಲ್ಲಿ ೩೫ ಮಂದಿ, ಉಳಿದ ಜಿಲ್ಲೆಗಳಲ್ಲಿ ಅದೆಷ್ಟೋ ರಾಜ್ಯದಲ್ಲಿ ಸಾವಿರಕ್ಕೆ ಹತ್ತಿರ. ಪ್ರತಿವರ್ಷವೂ ಮಾರ್ಚ್ ತಿಂಗಳ ಅಂತ್ಯದಲ್ಲಿ ಕೆಲಸದಿಂದ ಬಿಡುಗಡೆ, ಶೈಕ್ಷಣಿಕ ವರ್ಷದ ಆರಂಭದಲ್ಲಿ ಪುನರ್‌ನೇಮಕ. ಕೆಲಸದ ಭದ್ರತೆಗಾಗಿ, ವೇತನದ ಹೆಚ್ಚಳಕ್ಕಾಗಿ ಸತತ ಬೇಡಿಕೆ, ಮನವಿ, ಧರಣಿ, ಸತ್ಯಾಗ್ರಹ, ಒತ್ತಾಯಪೂರ್ವಕ ಆಗ್ರಹ. ಅನೇಕ ಮಂದಿಗೆ ವಯೋಮಿತಿಯೂ ಮೀರಿದೆ. ಮಂದುವರೆ ಆಗಿದೆ, ಮಕ್ಕಳೂ ಕೂಡ. ಆದರೂ ತಿಂಗಳಿಗೆ ನೂರೇ ರೂಪಾಯಿ ವೇತನದ ಮೇಲೆ ಬದುಕ ಬೇಕಾದ ಧಾರುಣ ಪರಿಸ್ಥಿತಿ. ಭವಿಷ್ಯದಲ್ಲಾದರೂ ಸೇವಾ ಭದ್ರತೆಯ ಬೆಳ್ಳಿ ಮೂಡಿತೆಂ ಎಂಬ ಹುಬಲದಿಂದ ಮತ್ತೆ ದುಡಿಮೆ ನೆಚ್ಚಿಕೊಂಡ ಪವಿತ್ರ ಶಿಕ್ಷಣ ಕ್ಷೇತ್ರದ ಸೇವೆಗೈಯಬೇಕು ಎಂಬ ಆದರ್ಶವಾದಿ ಛಲ.

ಈ ಸಲವಾಗಿ ಸರ್ಕಾರದ ಈ ತನಕ ನೀಡಿದ ಭರವಸೆ ಕೈಗೂಡಿಲ್ಲ. ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರವರು ೧೯೮೫-೮೬ ರಲ್ಲಿಯೇ ಈ ಕುರಿತಾದ ಮಾಹಿತಿಯನ್ನು ತಮ್ಮ ಅರೆಕಾಲಿಕ ಪತ್ರ ಸಂಖ್ಯೆ/ಇ ೧೯(೨) ಪಿಟಿಎ ೭-೮೫-೮೬ ರಂತೆ ತರಿಸಿದ್ದಾರೆ. ತರಿಸುತ್ತಲೇ ಇದ್ದಾರೆ. ಆದರೂ ಯಾವ ನಿರ್ಧಾರವೂ ಆಗಿಲ್ಲ. ಸರ್ಕಾರದ ಮುಂದೆ ನನ್ನ ಒತ್ತಾಯ. ಇಷ್ಟೇ – ಈಗಾಗಲೇ ಪೂರ್ಣ ಕಾಲಿಕ ಮಂಜೂರಾತಿ ಪಡೆದ ಹುದ್ದೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಅರ್ಹರನ್ನು ಪರಿಯೋಮಿತಿಯ ಪರಿವಿಂತಿ ಪರಿಗಣಿಸದೆ ಸೇವಾ ಹೆಚ್ಚಳದ ಆದ್ಯತೆಯಮೇಲೆ ಖಾಯಂಗೊಳಿಸಬೇಕು. ಈ ಕುರಿತು ಅಂತಿಮ ತೀರ್ಮಾನ ಶೀಘ್ರವಾಗಿ ಆಗಬೇಕು. ಅಲ್ಲಿಯತನಕ ಮಾಹೆಯಾನ ವೇತನ ೧೦೦ ರೂಪಾಯಿಯನ್ನು ೬೦೦ಕ್ಕಾದರೂ ಹೆಚ್ಚಿಸಬೇಕು ಪೂರ್ಣಕಾಲಿಕ ಶಿಕ್ಷಕರಿಗೆ ನೀಡುವ ಇತರ ಸೌಲಭ್ಯ ಇವರಿಗೂ ನೀಡಬೇಕು. ವರ್ಷಾಂತ್ಯದಲ್ಲಿ ಬಿಡುಗಡೆ ಮಾಡುವ ಕ್ರಮ ಕೈಬಿಡಬೇಕು. ಪುನಃ ಧರಣಿ, ಸತ್ಯಾಗ್ರಹಗಳಾಗದಿರಲಿ, ಈ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದರೊಳಗೆ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳಲಿ ಎಂದು ಆಶಿಸುತ್ತೇನೆ ಮತ್ತು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಸೆಕೆಂಡರಿ ಶಾಲಾ ಶಿಕ್ಷಣ ಸಚಿವರು). —ಮಾನ್ಯ ಅಧ್ಯಕ್ಷರೆ, ಈ ಅರೆಕಾಲಿಕ ಶಿಕ್ಷಕರನ್ನು ಖಾಯಂ ಮಾಡುವ ಕಾನೂನು ಸದ್ಯಕ್ಕೆ ನಮ್ಮಲ್ಲಿ ಇಲ್ಲ. ಈಗಾಗಲೇ ಪ್ರಾಥಶಾಲಾ ಶಿಕ್ಷಕರ ಖಾಲಿ ಹುದ್ದೆಗಳಿಗೆ ಭರ್ತಿ ಮಾಡತಕ್ಕ ಕೆಲಸ ಆಗುತ್ತಿದೆ. ಆದ್ದ ಈ ಅರೆಕಾಲಿಕ ಶಿಕ್ಷಕರು ತಮ್ಮ ತಮ್ಮ ಅರ್ಜಿಗಳನ್ನು ಹಾಕಿಕೊಳ್ಳಲಿ, ಅರ್ಹತೆ ಇನುವವರನ್ನು ನಾವು ಆಯ್ಕೆ ಮಾಡುತ್ತೇವೆ.

9. ಗೋಕಾಕ್ ಪಟ್ಟಣದಿಂದ ಕೇರಳಕ್ಕೆ ಸಾಗಿಸಲ್ಪಟ್ಟ ಹತ್ತಿ ಬೇಲ್‌ಗಳ ಲಾರಿಗಳು ಕಾಣೆಯಾಗಿರುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೆ, ಮಾರ್ಚ್ ತಿಂಗಳಲ್ಲಿ ಗೋಕಾಕ್ ಪಟ್ಟಣದ ಬಿದ್ರಿ ವರ್ತಕರು ತಮ್ಮ ಉಗ್ರಾಣದಿಂದ ಹತ್ತಿ (ಕಾಟನ್) ಬೇಲ್‌ಗಳನ್ನು ಗೋಕಾಕಿನ ಒಂದು ಟ್ರಾನ್ಸ್‌ಪೋರ್ಟ್ ಕಂಪೆನಿಯು ಮಂಚಾಂತರ ನೆರೆ ರಾಜ್ಯವಾದ ಕೇರಳಕ್ಕೆ ಕಳುಹಿಸಿಕೊಡಲು ಟ್ರಾನ್ಸ್‌ಪೋರ್ಟ್ ಕಂಪೆನಿಯಲ್ಲಿ ನೋಂದಣಿ ಮಾಡಿದ್ದರು. ಆದರೆ ಈ ಬೇಲ್‌ಗಳನ್ನು ಒಯ್ದಿರುವ ಟ್ರಕ್ಕಿನ ಬೋಗಸ್ ನಂಬರ್ ಪ್ಲೇಟುಗಳನ್ನು ಹೊಂದಿ ಈ ಬೇಲುಗಳನ್ನು ಕಳ್ಳತನ ಮಾಡಿದ್ದುಕೊಂಡು ಬಂದಿರುತ್ತದೆಂದು ಸಂಬಂಧಿತ ಬಿದ್ರಿ ವರ್ತಕರು ಪೋಲೀಸ್ ಇಲಾಖೆಗೆ ದೂರನ್ನು ಕೊಟ್ಟಿರುತ್ತಾರೆ.

ಸುಮಾರು ೩ ಲಕ್ಷ ರೂ. ಬೆಲೆಯ ಈ ಹತ್ತಿ ಗಂಟುಗಳು ಕಳುವಾಗಿ ಸುಮಾರು ಎರಡೂವರೆ ತಿಂಗಳಾದರೂ ಇದರ ಬಗ್ಗೆ ಯಾವುದೇ ವಿಷಯವೂ ವರ್ತಕರ ಗಮನಕ್ಕೆ ಬಂದಿಲ್ಲ. ಪೋಲೀಸ್

ಇಲಾಖೆಯವರು ಪ್ರಯತ್ನ ಮಾಡಿದರೂ ಅವರಿಗೆ ಯಾವುದೇ ಸುಳಿವೂ ಸಿಗುತ್ತಿಲ್ಲ. ಅಂತರರಾಜ್ಯ ಕಳ್ಳರ ಕಾಗೂ ಮೋಸಗಾರರ ತಂಡವಿರಬಹುದೆಂಬ ಶಂಕೆ ಇದ್ದು ಇದನ್ನು ಸಿ.ಓ.ಡಿ. ತನಿಖೆಗಾಗಿ ಕಳಿಸಿಕೊಡುವಂತೆ ಒತ್ತಾಯಿಸುತ್ತೇನೆ ಹಾಗೂ ಈ ಬಗ್ಗೆ ಸದನದಲ್ಲಿ ಹೇಳಿಕೆ ನೀಡುವಂತೆ ಗೃಹ ಮಂತ್ರಿಗಳಾಗಿರುವ ಮುಖ್ಯ ಮಂತ್ರಿಯವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ)–ಮಾನ್ಯ ಅಧ್ಯಕ್ಷರೆ, ಗೋಕಾಕ್‌ನ ಶ್ರೀ ಎ. ಎಸ್. ಬಿದರಿಯವರು ಕೊಟ್ಟ ದೂರನ್ನು ೩೬/೮೮ ರಲ್ಲಿ ನೋಂದಾಯಿಸಿಕೊಳ್ಳಲಾಗಿದ್ದು ನ್ಯಾಯಾಲಯದ ಆದೇಶದಂತೆ ಮೋಸದ ಮೊಕದ್ದಮೆಯನ್ನು ಕೆಳಕಂಡವರ ಮೇಲೆ ಗೋಕಾಕ್ ಪೋಲೀಸ್ ಠಾಣೆಯಲ್ಲಿ ನೋಂದಾಯಿಸಿಕೊಳ್ಳಲಾಗಿದೆ.

೧. ಎ ಕೆ. ಕಿತ್ತೂರ ಟ್ರಾನ್ಸ್‌ಪೋರ್ಟ್ ಏಜೆಂಟ್, ಸ್ವಾಪ್ತಿಕ್ ಟ್ರಾನ್ಸ್‌ಪೋರ್ಟ್, ಗೋಕಾಕ್

೨. ಆರ್. ಸುಂದರನ್, ಡ್ರೈವರ್ ಟ್ರಕ್ ನಂ. ಸಿಎಕೆ ೯೦೯೦

೩. ಕೆ, ಸೆಲ್ವರಾಜ್, ಟ್ರಕ್ ಮಾಲೀಕ (ಸಿಎಕೆ ೯೦೯೦)

ಈಗ ತನಿಖೆ ಮಾಡಲಾಗುತ್ತಿದೆ.

೨. ನಾರಾಯಣ ಕೃಷ್ಣ. ಸ್ಪಿನ್ನರ್ಸ್ ಪ್ರೈವೇಟ್ ಲಿಮಿಟೆಡ್, ಉದಮಲಪೇಟೆ. ತಮಿಳ್ನಾಡುರವರಿಗೆ ೫೦ ಹತ್ತಿ ಬೇಲ್‌ಗಳನ್ನು ತಲುಪಿಸುವ ಸಲುವಾಗಿ ಟ್ರಾನ್ಸ್‌ಪೋರ್ಟ್ ಏಜೆಂಟರಾ ಸಿಎಕೆ ೯೦೯೦ ಟ್ರಕ್‌ನ ದಾಖಲಾತಿಗಳನ್ನು ಪರಿಶೀಲಿಸದೆ ಹತ್ತಿ ಬೇಲ್‌ಗಳನ್ನು ಸದರಿ ಲಾರಿಗೆ ಹಾಕಿ ಕಳುಹಿಸಿಕೊಟ್ಟಿದ್ದು ಈವರೆವಿಗೂ ಹತ್ತಿ ಬೇಲ್‌ಗಳು ಸೇರಬೇಕಾದ ಸ್ಥಳಕ್ಕೆ ಸೇರಿಲ್ಲವೆಂದು ಫಿರ್ಯಾದಿಯು ದೂರಾಗಿರುತ್ತದೆ.

೩. ತಪಾಸಣೆಯನ್ನು ಕೈಗೊಂಡ ಸಿಎಸ್‌ಐ ರವರು ಸದರಿ ಟ್ರಕ್‌ಗಾಗಿ ಎಲ್ಲಾ ಚೆಕ್ ಪೋಸ್ಟ್‌ನ ದಾಖಲಾತಿಗಳಲ್ಲಿ ಪರಿಶೀಲಿಸಿದರೂ ಸಿಎಕೆ ೯೦೯೦ರ ನಂಬರ್‌ನ ಟ್ರಕ್ ಬಂದ ಬಗ್ಗೆ ದಾಖಲಾತಿ ಕಂಡು ಬಂದಿರುವುದಿಲ್ಲ. ತನಿಖೆಯಿಂದ ಹತ್ತಿ ಬೇಲ್‌ಗಳನ್ನು ಒಯ್ದಂ ಟ್ರಕ್ಕಿನ ಡ್ರೈವರ್ ಫೋಟೊ ನಂಬರ್ ಪ್ಲೇಟುಗಳನ್ನು ಹಾಕಿಕೊಂಡು ಸಾಗಿಸಿರುವುದು ಕಂಡುಬರುತ್ತದೆ.

೪. ಶ್ರೀ ಎ ಕೆ. ಕಿತ್ತೂರ್. ಟ್ರಾನ್ಸ್‌ಪೋರ್ಟ್ ಏಜೆಂಟ್ ಗೋಕಾಕ್ ಇವರನ್ನು ಪೋಲೀಸರು ದಿನಾಂಕ ೧೧-೫-೧೯೮೮ ರಂದು ಬಂಧಿಸಿ ಕೋರ್ಟಿಗೆ ಹಾಜರುಪಡಿಸಿರುತ್ತಾರೆ.

೫. ಕಳವಾದ ಹತ್ತಿ ಬೇಲ್‌ಗಳ ಮೌಲ್ಯ ೩ ಲಕ್ಷ ೩೫ ಸಾವಿರ ರೂಪಾಯಿಗಳಾಗಿರುತ್ತದೆ. ಈ ಪ್ರಕರಣದ ಮಾಲು ಮತ್ತು ಆರೋಪಿಗಳನ್ನು ಪತ್ತೆ ಹಚ್ಚಲು ಪ್ರಯತ್ನಗಳು ಮುಂದುವರಿಯುತ್ತಿವೆ.

10) ಗ್ರಾಮಾಭಿವೃದ್ಧಿ ಕಾರ್ಯದರ್ಶಿಗಳು ಕೋಲಾರ ಜಿಲ್ಲೆಯಲ್ಲಿ ಶಾಸಕರ ಗಮನಕ್ಕೆ ತಾರದೆ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಶಂಕು ಸ್ಥಾಪನೆಗಳನ್ನು ಮಾಡಿರುವುದು

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ಸರಕಾರದ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಾದ ಎಸ್. ಎಸ್. ವೀಣಾಕ್ಷಿ ಸುಂದರಂ, ಐ.ಎ.ಎಸ್.ರವರು ಇತ್ತೀಚೆಗೆ ನನ್ನ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಿಸಿದಂತೆ ಹಲವಾರು ಸರಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಉದ್ಘಾಟನೆ, ಶಂಕು ಸ್ಥಾಪನೆ ಮಾಡಿರುವುದು ಸರಿಯಷ್ಟೆ. ಉದಾಹರಣೆ: ನನ್ನ ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ದೇವರಗುಡಿಯಲ್ಲಿ ಕಿರು ನೀರಾವರಿ ಸರಬರಾಜು ಯೋಜನೆಯ ಉದ್ಘಾಟನೆಯನ್ನು ದಿನಾಂಕ ೨೫-೫-೧೯೮೮ ರಂದು ನೆರವೇರಿಸಿದ್ದು ಈ ಹಿಂದೆಯೂ ಸಹ ನನ್ನ ಕ್ಷೇತ್ರದ ಗಂಡಿಬೆಂಡೆ ತಾಲೂಕಿಗೆ ಸೇರಿದ ಹಂಪಸಂದ್ರ ಮತ್ತು ಬಾಗೇಪಲ್ಲಿ ತಾಲೂಕಿಗೆ ಸೇರಿದ ಸೋಮೇಸಹಳ್ಳಿ ಮುಂತಾದ ವಿವಿಧ ಕಾರ್ಯಕ್ರಮಗಳ ಉದ್ಘಾಟನೆ, ಶಂಕುಸ್ಥಾಪನೆಗಳನ್ನು ನೆರವೇರಿಸಿರುತ್ತಾರೆ. ಈ ಅಧಿಕಾರಿ ಕ್ಷೇತ್ರದ ಶಾಸಕರಾದ ನನ್ನ ಗಮನಕ್ಕೆ ತರದೆ, ಆಹ್ವಾನ ಪತ್ರಿಕೆಯಲ್ಲೂ ನನ್ನ ಹೆಸರನ್ನು ಮುದ್ರಿಸದೆ ತಾವೇ ಶಾಸಕರೊಪಾದಿಯಲ್ಲಿ ವರ್ತಿಸಿ ಶಾಸಕಾಂಗಕ್ಕೆ ಅಪಚಾರ ವೆಸಗಿರುವುದಲ್ಲದೆ ವೈಯಕ್ತಿಕವಾಗಿಯೂ ನನ್ನ ಘನತೆಗೆ ಕುಂದು ತಂದಿದ್ದಾರೆ. ಸಿಕ್ಕಾಪಟ್ಟೆ ತವಗೆ